(SRI H. K. VEERANNA GOWDH)

Hon'ble Members of this House have approached either the District Board President, or the Deputy Commissioner or the Chief Engineer and they have got many roads included and got some altera ions made. That is my information.

ಶ್ರೀ ಜಿ. ಶಿವಪ್ಪ.—ಈ ಪ್ರಶ್ನೆಯಲ್ಲಿ ಚಾಮರಾಜ ನಗರ ತಾಲ್ಲೂಕಿನಲ್ಲಿರುವ ರಸ್ತೆಯ ವಿಚಾರವಿದೆ, ಅದಕ್ಕೆ ಉತ್ತರ ಹೇಳುವಾಗ ಜನರ ಆಗಿ ಹೇಳಿದ್ದರೆ; ಹಾಗಿದ್ದರೆ ದೊಡ್ಡ ಡಿಸ್ಟ್ರಿಕ್ಟ್‌ಗಳು, ಚಿಕ್ಕ ಡಿಸ್ಟ್ರಿಕ್ಟ್ ಗಳು ಎಲ್ಲಕ್ಕೂ ಒಂದೇ ರೀತಿ ಮಾಡುತ್ತಾರೆಯೆ?

Sri H. K. VEERANNA GOWDH.—The Hon'ble Member was perhaps inattentive when I explained the position. I have already said that I have allowed a margin of 25 per cent with regard to bigger districts.

Sri C. K. RAJAIAH SHETTY.—The Minister was pleased to state that 100 miles of road will be taken over from each district. Is it the intention of Government to drop the rest of the roads in each district?

Sri H. K. VEERANNA GOWDH.—They will not be dropped. They will be there and by and by they will be taken over.

Bangalore-Hunasanahalli and Kanakapura-Hunasanahalli Bus Service.

Q.—676. Sri S. KARIAPPA (Virupakshipura).—

Will the Government be pleased to state:—

(*a*) the names of bus services that are expected to ply between (i) Bangalore and Hunasanahalli and (ii) Kanakapura and Hunasanahalli;

(*b*) the names of bus services that have been stopped for the past several months;

(*c*) whether they are aware that one of the owners of the bus services pays the road cess for two buses, but runs only one bus by over-loading it?

A.—Sri C. M. POONACHA (Minister for Home Affairs and Industries).—

(*a*) (i) Bangalore and Hunasanahalli.—

1. Sri Venkateswara Motor Service.
2. Sri Rangaiatha Motor Service.
3. K.N.S. Motor Service.
4. Deccan Motor Service.

(ii) Kanakapura and Hunasanahalli.—

K.N.S. Motor Service.

(*b*) Nil.

(*c*) No.

ಶ್ರೀ ಎಸ್. ಕರಿಯಪ್ಪ.—ಓಡಾಡುತ್ತಿದ್ದ ಬಸ್ಸುಗಳು ಕೆಲವು ಕಾಲ ನಿಂತು ಹೋದರೆ, ಹೀಗೆ ನಿಂತಿವೆ ಎಂದು ಸ್ಥಳೀಯ ಪೋಲೀಸರು ಅಧಿಕಾರಿಗಳು ವರದಿ ಮಾಡುವ ಪದ್ಧತಿ ಆಚರಣೆಯಲ್ಲಿದೆಯೇ?

*ಶ್ರೀ ಸಿ. ಎಂ. ಪೂಣಚ್ಚ.—ಬಸ್ಸುಗಳು ಆಯಾ ಮಾರ್ಗದಲ್ಲಿ ಸಾಮಾನ್ಯವಾಗಿ ಹೋಗುವಂಥ ಕಾಲವನ್ನು ಬಿಟ್ಟು ತಾತ್ಕಾಲಿಕವಾಗಿ ನಿಂತರೆ, ಏಕೆನಿಂತಿದೆ ಎಂದು ಬಸ್ಸಿನ ಮಾಲೀಕರು ನಿಯಮಗಳ ಪ್ರಕಾರ ತಿಳಿಸಬೇಕು. ಸ್ಥಳದಿಂದ ಸ್ಥಳಕ್ಕೆ ನಡೆಯುತ್ತಿರುವ ಬಸ್ಸು ಒಂದು ತಿಂಗಳಿಗಿಂತ ಹೆಚ್ಚು ಅವಧಿ ನಿಂತು ಹೋದರೆ ಸ್ಥಳೀಯ ಅಧಿಕಾರಿಗಳು ಅದನ್ನು ಗಮನಿಸಿ ಅಗತ್ಯವಾದ ಕಾರ್ಯ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಸ್. ಕರಿಯಪ್ಪ.—ಹೀಗೆ ಬೆಂಗಳೂರಿನಿಂದ ಹುಣಸನಹಳ್ಳಿಗೆ ಓಡಾಡುತ್ತಿದ್ದ ಬಸ್ಸು ನಿಂತುಹೋಗಿ ಜನರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಸಿ. ಎಂ. ಪೂಣಚ್ಚ.—ಈ ಮಾರ್ಗದಲ್ಲಿ ಓಡಾಡುವ ಬಸ್ಸು ನಿಂತು ಹೋಗಿ ಜನರಿಗೆ ಅನಾನುಕೂಲವಾಗಿರುವುದು ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಬಸ್ಸುಗಳು ಓಡುತ್ತಿರುವ ಕಡೆ ಅಲ್ಲಲ್ಲಿ ಕೆಲವು ಪೋಲೀಸ್ ಸ್ಪೆಷಲ್‌ಗಳಲ್ಲಿ ಬಸ್ಸುಗಳು ಬರುವುದಕ್ಕೂ ಹೋಗುವುದಕ್ಕೂ ರಿಕಾರ್ಡ್ ಇರುತ್ತದಲ್ಲವೆ?

ಶ್ರೀ ಸಿ. ಎಂ. ಪೂಣಚ್ಚ.—ಹೌದು. ಬಸ್ಸು ಅಲ್ಲಿಗೆ ಬಂದಾಗ ಅದರ ನಂಬರು, ಕಾಲ ಎಲ್ಲವನ್ನೂ ಬರೆದು ಕೊಳ್ಳುತ್ತಾರೆ.

ಶ್ರೀ ಎಸ್. ಕರಿಯಪ್ಪ.—28ನೇ ಮೇ 1957 ಕ್ಕೆ ಮುನ್ನ ರಂಗನಾಥ ಮೋಟಾರ್ ಸರ್ವಿಸ್ ಬಸ್ಸು ನಿಂತಿತ್ತೇ ಇಲ್ಲವೆ ಎನ್ನುವುದನ್ನು ರಿಕಾರ್ಡುಗಳನ್ನು ನೋಡಿ ತಿಳಿಸುತ್ತಿರಾ?

ಶ್ರೀ ಸಿ. ಎಂ. ಪೂಣಚ್ಚ.—ನನಗೆ ತಿಳಿವ ಮಟ್ಟಿಗೆ ಆ ಬಸ್ಸು ಸರಿಯಾಗಿ ಓಡಾಡುತ್ತಿದ್ದು ಯಾಂತ್ರಿಕ ತೊಂದರೆಯಿಂದ ಎರಡು ಮೂರು ದಿವಸ ನಿಂತಿರಬಹುದು. ಅದು ಸರಿಯಾಗಿ ನಡೆಯುತ್ತಿತ್ತೆಂದು ನನ್ನ ಉತ್ತರ.

ಶ್ರೀ ಎನ್ ಕರಿಯಪ್ಪ.—ನಾಲ್ಕು ತಿಂಗಳ ಮೇಲೆ ನಿಂತಿತ್ತೇ ಇಲ್ಲವೇ ಎನ್ನುವುದನ್ನು ವಿಚಾರಮಾಡಿ ನೋಡುತ್ತೀರಾ?

ಶ್ರೀ ಸಿ. ಎಂ. ಪೂಣಚ್ಚ.—ಖಂಡಿತವಾಗಿ ವಿಚಾರ ಮಾಡುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ.—ಒಂದು ಬಸ್ ನಿಂತರೆ ಬೇರೆ ಬಸ್‌ಗಳಲ್ಲಿ ಓವರ್ ಲೋಡ್ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

---

*Asterisk indicates that the remarks or speeches have not been revised by the Member concerned.

ಶ್ರೀ ಸಿ. ಎಂ. ಪೂಣಚ್ಚ.—ಕೆಲವು ಸಮಯ ಓವರ್ ಲೋಡ್ ಮಾಡುತ್ತಾರೆ. ಅಂಥಾ ನಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೇಸ್ ದಾಖಲು ಮಾಡುತ್ತಾರೆ.

ಶ್ರೀ ಎಸ್. ಆರ್. ರಾಮಯ್ಯ.—ಸ್ಪೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ಹಾಕದೇ ಇರುವುದರಿಂದ, ನದ್ಯಕ್ಕೆ ಇರುವ ಬೇರೆ ಬಸ್ಸುಗಳು ತುಂಬಾ ಓವರ್ ಲೋಡ್ ಆಗಿ ಹೋಗುತ್ತಿರುವುದು ನರಕಾರದ ಗಮನಕ್ಕೆ ಬಂದಿದ್ದರೆ ಅದಕ್ಕೆ ತಕ್ಕ ಕ್ರಮವನ್ನು ತೆಗೆದು ಕೊಂಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಬೇರೆ ಬಸ್ಸು ಇಟ್ಟು ಕೊಂಡವರು ಒಂದೊಂದೇ ಬಸ್ಸನ್ನು ಇಟ್ಟುಕೊಂಡು ಸರ್ವಿಸ್ ನಡೆಸುವಂಥವರಾಗಿರುವದರಿಂದ, ಒಂದು ವೇಳೆ ಏನಾದರೂ ಯಾಂತ್ರಿಕ ತೊಂದರೆಯಾಗಿ ಬಸ್ಸು ಕೆಟ್ಟು ಹೋಗಿ ಅದರ ಮೂಲಕ ಪ್ರಯಾಣಿಕರಿಗೆ ಅನನುಕೂಲ ಉಂಟಾಗಿರಬಹುದು.

ಶ್ರೀ ಎಸ್. ಆರ್. ರಾಮಯ್ಯ.—ಕಾನೂನಿನ ನಿಯಮದ ಪ್ರಕಾರ spare ಬಸ್ಸು ಇಟ್ಟು ಕೊಂಡಿರ ಬೇಕು ಎಂದು ನಿಯಮವಿಲ್ಲವೆ ?

ಶ್ರೀ ಸಿ. ಎಂ. ಪೂಣಚ್ಚ.—ಕಾನೂನು ನಿಯಮ ಹಾಗೆ ಇದೆ. ಆದರೆ ಅಂತವರು ಒಂದೊಂದೇ ಬಸ್ಸು ಇಟ್ಟು ಕೊಂಡು ಸರ್ವಿಸ್ ನಡೆಸುತ್ತಿದ್ದಾರೆ. Spare ಬಸ್ ಇಡುವದಕ್ಕೆ ಅವರ ಹತ್ತಿರ ಣವಿರುವದಿಲ್ಲ. ಒಂದೊಂದೇ ಬಸ್ಸು ಇಟ್ಟುಕೊಂಡಂವರು ಕೆಲವು ಜನರು ಒಟ್ಟಿಗೆ ಸೇರಿ amalgamate ಮಾಡಿ ಒಂದೇ workshop ಮಾಡಿಕೊಂಡು ಸರ್ವಿಸ್ ನಡೆಸುತ್ತಿದ್ದಾರೆ. ಈ ರೀತಿ amalgamate ಮಾಡಿ ಸರ್ವಿಸ್ ನಡೆಸುವಂತೆ ಒಂದು scheme ಸಹ ಇದೆ. ಆದರೆ ಅದನ್ನು ಅಷ್ಟು ಬಲವತ್ತರವಾಗಿ ಕಾರ್ಯರೂಪದಲ್ಲಿ ತರಲು ಸ್ವಲ್ಪ ತೊಂದರೆಯುಂಟಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಲವು ಪೋಲೀಸ ಸ್ಟೇಷನ್ನುಗಳಲ್ಲಿ ರಿಜಿಸ್ಟರ್‌ನಲ್ಲಿ ಡ್ರೈವರ್ ರುಜು ಹಾಕುತ್ತಾರೆ ಎಂದು ಮಂತ್ರಿಗಳು ಈಗತಾನೆ ಉತ್ತರ ಕೊಡಿಸಿದರು. ಆದರೆ ಎಷ್ಟೋಸಾರಿ ಡ್ರೈವರ್ ಬದಲು ಕಂಡಕ್ಟರ್ ರುಜು ಹಾಕುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಕಂಡಕ್ಟರ್ ಅಥವಾ ಡ್ರೈವರ್ ಯಾರಾದರೊಬ್ಬರು ರುಜು ಹಾಕಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೂಲ್ ಪ್ರಕಾರ ಡ್ರೈವರ್ ರುಜು ಹಾಕಬೇಕು ಎಂದು ಇರುವಾಗ ಕಂಡಕ್ಟರ್ ರುಜು ಹಾಕಿದರೆ ಅದು rules violate ಮಾಡಿದಹಾಗೆ ಆಗುವುದಿಲ್ಲವೇ ?

Sri C. M. POONACHA.—One of the staff, either the driver or the conductor, may sign.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬಸ್ಸು ಕೆಟ್ಟು ಹೋಗಿ ಸರ್ವಿಸ್ ನಿಲ್ಲಿಸಿದ್ದನ್ನು ಬಸ್ ಮಾಲೀಕರು ನರಕಾರಕ್ಕೆ ತಿಳಿಸಬೇಕು ಎಂದು ಒಂದು ಸೂಚನೆ ಇಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಟ್ರಾನ್ಸ್‌ಪೋರ್ಟ್ ಇಲಾಖೆ ಇದರ ನಲುವಾಗಿ ಇದೆ. ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಇದ್ದಾರೆ. ಬಹಳ ದೀರ್ಘ ಕಾಲದವರೆಗೆ ಸರ್ವಿಸ್ ನಡೆಯುನದೆ ಹೋದರೆ ಆಗ್ಗೆ ಟ್ರಾನ್ಸ್‌ಪೋರ್ಟ್ ಇಲಾಖೆಯ ತಿಳುವಳಿಕೆಗೆ ಬರುತ್ತದೆ. ಕೂಡಲೇ ನೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪೋಲೀಸರಿಗೆ ಗೊತ್ತಾಗುತ್ತದೆ ಅಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಗೊತ್ತಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಪ್ರಯಾಣಿಕರು ಜಾಸ್ತಿ ಇರುವುದರಿಂದ ಓವರ್ ಲೋಡ್ ಮಾಡಿ ಪ್ರಯಾಣಿಕರನ್ನ ಬಸ್ ಟಾಪ್ ಮೇಲೆ ಸಹ ಕೂಡಿಸಿಕೊಂಡು ಹೋಗುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಅದನ್ನು ನಾನು ಹೇಳಲಾರೆ. ಕೆಲವೊಂದು ಕಡೆ ಆ ರೀತಿ ಸಂಭವಿಸಿರಬಹುದು.

ಶ್ರೀ ಟಿ. ಹನುಮಯ್ಯ.—ಆ ರೀತಿಯಾಗಬಾರದು ಎಂಬುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಸಿ. ಎಂ. ಪೂಣಚ್ಚ.—ಅವರ ಮೇರೆ over load ಮಾಡಿದ್ದಕ್ಕೆ ಕೂಡಲೇ ಖಟ್ಲೆ ಹಾಕಲಾಗುವುದು.

ಶ್ರೀ ಎಸ್. ಆರ್. ರಾಮಯ್ಯ.—ಬಸ್ಸು ಸರ್ವಿಸ್ ನಸ್ಪೆಂಡ್ ಮಾಡಿದ ಕಾಲದಲ್ಲಿ ಬೇರೆ ಬಸ್ಸು ಓಡಿಸುವ ದಕ್ಕೆ ಏನಾದರೂ ವ್ಯವಸ್ಥೆ ಇಟ್ಟು ಕೊಂಡಿದ್ದೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಆಯಾಯ ಅವಧಿಯನ್ನು ಅನುಸರಿಸಿ ಮಾಡಲಾಗುವುದು. ಒಂದು ತಿಂಗಳಿನವರೆಗೆ ಮಾತ್ರ ಇದ್ದರೆ, ಒಂದು ತಿಂಗಳ ಗೋಸ್ಕರ ಬೇರೆ ಯಾರೂ ಬರುವದಿಲ್ಲ. ಒಂದು ವೇಳೆ ಸರ್ವಿಸ್ cancel ಮಾಡಿದ್ದರೆ ಆ ಮಾರ್ಗದಲ್ಲಿ ಬೇರೆ ಬಸ್ಸು ಓಡಿಸಲಾಗುವುದು. ಚಿಕ್ಕ ಅವಧಿಯವರೆಗೆ ಸಸ್ಪೆಂಡ್ ಮಾಡಿದ್ದರೆ ಇನ್ನೊಬ್ಬರು ಬಸ್ ಓಡಿಸುವ ವ್ಯವಸ್ಥೆ ಮಾಡಲಾಗುವದಿಲ್ಲ.

Location of Intermediate College in Shimoga.

Q.—972. Sri A. R. BADRI NARAYAN (Thirthahalli).—

Will the Government be pleased to state :—

(*a*) the date on which the new Intermediate College building in Shimoga was constructed ;

(*b*) whether any protests were made that the location of the building in its present place would cause great inconvenience to the students ;

(*c*) whether an assurance was given that a foot bridge to the Tunga river would be constructed to avoid inconvenience to the students ;

(*d*) if so, the action they have taken in the matter ?

A.—Sri V. VENKATAPPA (Minister for Education).—

(*a*) During 1940-42.

(*b*) Yes.

(*c*) Government are not aware of any definite assurance having been given.